**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಶಿರಾ**

**ಸಿ.ಸಿ.ನಂಃ49/2026**

**ಪಿರ್ಯಾದುದಾರರು** ಃ ತಾವರೆಕೆರೆ ಪೊಲೀಸ್

**--ವಿರುದ್ಧ--**

**ಆರೋಪಿ** : ರಾಜಣ್ಣ, ಬಿನ್ ಭೂತಣ್ಣ,
ವಯಸ್ಸು 26 ವರ್ಷ,
ವಾಸಃ ಪುರಲೇಹಳ್ಳಿ ಗ್ರಾಮ,
ಶಿರಾ ತಾಲ್ಲೂಕು, ತುಮಕೂರು.

## ದಂ. ಪ್ರ. ಸಂ. ಕಲಂ 313 ರ ರಡಿಯಲ್ಲಿ ಆರೋಪಿಯ ಹೇಳಿಕೆ

**ಪ್ರಶ್ನೆ 1:** ಈ ನ್ಯಾಯಾಲಯದಲ್ಲಿನ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುತ್ತೀರಾ?

**ಆರೋಪಿಯ ಉತ್ತರಃ**

**ಪ್ರಶ್ನೆ.2:** ಪ್ರಾಸಾ.3 / ಮಹಾಲಕ್ಷ್ಮಮ್ಮ ಹೆಚ್.ಎನ್. ರವರು ತಮ್ಮ ಸಾಕ್ಷ್ಯದಲ್ಲಿ, ದಿ:03.09.2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಪುರ್ಲೇಹಳ್ಳಿ ಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದ ಮೇರೆಗೆ ನಾನು ಸ್ಥಳಕ್ಕೆ ಹೋಗಬೇಕಾಗಿದ್ದು, ಚಾಸಾ-4 ರಿಂದ 6 ರವರ ಜೊತೆ ಸ್ಥಳಕ್ಕೆ ಹೋಗಿದ್ದು, ನಂತರ ಒಬ್ಬ ವ್ಯಕ್ತಿ ಮದ್ಯವನ್ನು ಮಾರಾಟ ಮಾಡುತ್ತಿದ್ದು, ಅವರು ನಮ್ಮನ್ನು ನೋತಿ ಒಬ್ಬ ವ್ಯಕ್ತಿ ಓಡಿ ಹೋಗಲು ಪ್ರಯತ್ನಿಸಿದ್ದು, ಅವರನ್ನು ಹಿಡಿದು ವಿಚಾರಿಸಿದಾಗ ಅವರ ಹೆಸರು ರಾಜಣ್ಣ ಎಂದು ತಿಳಿದು ಬಂದಿದ್ದು, ಸದರಿ ವ್ಯಕ್ತಿಯು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದದ್ದು ಕಂಡಿ ಬಂದಿದ್ದು, ಸದರಿ ಮದ್ಯದ ಪ್ಯಾಕೇಟ್ ಗಳನ್ನು ಅಮಾನತ್ತು ಪಡಿಸಿಕೊಂಡು, FSL ಪರೀಕ್ಷೆಗಾಗಿ ಒಂದೊಂದನ್ನು ತೆಗೆದುಕೊಂಡು ಬಳಿಯಲ್ಲಿ ಸುತ್ತಿ 'ಎನ್' ಎಂಬ ಮುದ್ರೆಯಿಂದ ನಮೂದಿಸಲಾಗಿರುತ್ತದೆ. ಸದರಿ ಮದ್ಯದ ಪ್ಯಾಕೇಟ್ ಗಳಲ್ಲಿರುವ ಸಿರೀಯಲ್ ನಂಬರ್ ಅನ್ನು ಪಂಚನಾಮೆಯಲ್ಲಿ ನಮೂದಿಸಿಲಾಗಿರುತ್ತದೆ. ನಂತರ ಆರೋಪಿ ಮತ್ತು ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಚಾಸಾ-9 ರವರಿಗೆ ಒಪ್ಪಿಸಲಾಗಿರುತ್ತದೆ ಎಂಬುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನಿವೇನು ಹೇಳುತ್ತೀರಿ?

**ಆರೋಪಿಯ ಉತ್ತರಃ**

**ಪ್ರಶ್ನೆ.3:** ಪ್ರಾಸಾ.4 / ಶ್ರೀ ನಿವಾಸಪ್ಪ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ03-09-2019 ರಂದು ತಾವರೆಕೆರೆ ಪೊಲೀಸ್ ಠಾಣೆ ಕರ್ತವ್ಯದಲ್ಲಿ ಇರುವಾಗ ಚಾಸಾ 1 ರವರು ದೂರವಾಣಿ ಕರೆ ಮಾಡಿ ಪುರಲೇ ಹಳ್ಳಿ ಗ್ರಾಮದ ದೇವಸ್ಥಾನದ ಬಳಿ ಇರುವ ಅಂಗಡಿಯಲ್ಲಿ ಯಾರೊ ಒಬ್ಬರು ಅಕ್ರಮವಾಗಿ ಮಧ್ಯ ಮಾರಾಟ ಮಾಡುವ ಬಗ್ಗೆ ಮಾಹಿತಿಯಂತೆ ದಾಳಿ ಮಾಡಲು ಬರುವಂತೆ ತಳಿಸಿರುತ್ತಾರೆ. ಕೂಡಲೆ ನಾನು, ಚಾಸಾ 1 ರಿಂದ 6

ರವರು ಸರ್ಕಾರಿ ಜೀಪಿನಲ್ಲಿ ಪುರಲಹಳ್ಳಿ ಗ್ರಾಮಕ್ಕೆ ಹೋಗಿ ದೂರದಿಂದ ನೋಡಲಾಗಿ ಒಂದು ಅಂಗಡಿಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುವ ಬಗ್ಗೆ ಗೊತ್ತಾಗಿರುತ್ತದೆ. ನಾನು ಮತ್ತು ಚಾಸಾ 1, 4 ರಿಂದ 7 ರವರು ಸದರಿ ಅಂಗಡಿಯ ವ್ಯಕ್ತಿಯನ್ನು ಹಿಡಿಯಲು ಹೋದಾಗ ಸಮ ವಸ್ತ್ರ ದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ಸದರಿ ವ್ಯಕ್ತಿಯ ಓಡಿ ಹೋಗುವ ಮೊದಲು ಒಂದು ಬ್ಯಾಗನ್ನು ಬಿಸಾಡಿ ಹೊದಾಗ ಅದನ್ನು ಪರಿಶೀಲಿಸಿದಾಗ 90 ml ನ ರಾಜಾ Wisky ಯ 48 ಟೆಟ್ರಾ ಪ್ಯಾಕೇಟ್ ಮತ್ತು ಮಾರಾಟ ಮಾಡಿ ಇಟ್ಟುಕೊಂಡಿದ್ದ ರೂ.250/- ಹಣ ಜೊತೆಗೆ ಒಂದು ಬಿಳಿ ಬ್ಯಾಗ್ ನ್ನು ಚಾಸಾ 1 ರವರು ನಮ್ಮ ಸಮಕ್ಷಮ ಸಂಜೆ 4.30 ರಿಂದ 5.30 ರವರೆಗೆ ಪಂಚನಾಮೆ ಮೂಲಕ ವಶಕ್ಕೆ ಪಡೆದುಕೊಂಡಿರುತ್ತಾರೆ. ಚಾಸಾ 1 ರವರು 48 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳ ಪೈಕಿ 3 ಪ್ಯಾಕೇಟುಗಳನ್ನು FSL ಪರೀಕ್ಷೆಗಾಗಿ ತೆಗೆದುಕೊಂಡು ಬಿಳಿ ಚೀಲದಲ್ಲಿ ಸುತ್ತಿ ಎನ್ ಅಕ್ಷರ ಕೊಟ್ಟಿರುತ್ತೇವೆ. ಸದರಿ ಮಧ್ಯದ ಪ್ಯಾಕೇಟುಗಳನ್ನು ಚಾಸಾ 1 ರವರು ಠಾಣೆಗೆ ತೆಗೆದುಕೊಂಡು ಹೋಗಿ ಮುಂದಿನ ಕ್ರಮಕ್ಕಾಗಿ ವರಿದಿ ಕೊಟ್ಟಿರುತ್ತಾರೆ. ಘಟನೆ ಬಗ್ಗೆ ಚಾಸಾ 9 ರವರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂಬುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನಿವೇನು ಹೇಳುತ್ತೀರಿ?

**ಆರೋಪಿಯ ಉತ್ತರಃ**

**ಪ್ರಶ್ನೆ**.4: ಪ್ರಾಸಾ.5/ ಪುರುಷೋತ್ತಮ್ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 03-09-2019 ರಂದು ಸಂಜೆ 6.05 ಗಂಟೆ ಸಮಯದಲ್ಲಿ ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ವರದಿ ಮತ್ತು ಮಧ್ಯದ ಮಾಲನ್ನು ಪರಿಶೀಲಿಸಿ ಹಾಲಿ ಪ್ರಕರಣದಂತೆ ಪ್ರಥಮ ವರ್ತಮಾನ ವರದಿ ದಾಖಲಿಸಿರುತ್ತೇನೆ. ಸದರಿ ಪ್ರ.ವ.ವ.ನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಮಧ್ಯದ ಮಾಲನ್ನು ಠಾಣಾ ಮಾಲು ಪಟ್ಟಿಯಲ್ಲಿ ನಮೂದು ಮಾಡಿರುತ್ತೇನೆ. ಚಾಸಾ 2 ರಿಂದ ಚಾಸಾ 7 ರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. ದಿಃ13-09-2019 ರಂದು ಮಧ್ಯದ ವಸ್ತುಗಳನ್ನು ಯಾವ ಅಂಗಡಿಯಿಂದ ಮಾರಾಟ ಆಗಿರುತ್ತದೆ ಎಂಬುವ ಬಗ್ಗೆ ವರದಿ ನೀಡುವಂತೆ ಕೆ.ಎಸ್.ಬಿ.ಸಿ.ಎಲ್. ಅವರಿಗೆ ಮನವಿ ಮಾಡಿರುತ್ತೇನೆ. ನಾನು ವಶಕ್ಕೆ ಪಡೆದುಕೊಂಡ ಮಧ್ಯದ ವಸ್ತುಗಳನ್ನು ವಿಲೇವಾರಿ ಮಾಡಿಕೊಳ್ಳಲು ಅಭಕಾರಿ ಉಪಯುಕ್ತರು ತುಮಕೂರು ರವರಿಗೆ ಪತ್ರ ಬರೆದಿರುತ್ತೇನೆ. ದಿಃ16-09-2019 ರಂದು ಕೆ.ಎಸ್.ಬಿ.ಸಿ.ಎಲ್. ರವರು ತಾವರೆಕೆರೆಯ ಮಾರುತಿ ವೈನ್ಸ್/ಗೋಪಾಲ ಕೃಷ್ಣರವರಿಗೆ ಸೇರಿದ ಅಂಗಡಿಯಿಂದ ಮಾರಾಟವಾಗಿರುತ್ತದೆ ಎಂಬ ಬಗ್ಗೆ ಪತ್ರವನ್ನು ಪಡೆದಿರುತ್ತೇನೆ. ದಿಃ19-09-2019 ರಂದು ಮಧ್ಯದ ವಸ್ತುಗಳನ್ನು ಪರೀಕ್ಷೆ ಮಾಡಲು FSL ಗೆ ಡಿವೈಎಸ್.ಪಿ ರವರ ಮೂಲಕ ಕಳುಹಿಸಿ ಸ್ವೀಕೃತಿ ಪಡೆದಿರುತ್ತೇನೆ. ಆರೋಪಿಯು ನೀರಿಕ್ಷಣ ಜಾಮೀನನ್ನು ಮಾನ್ಯ Sessions ನ್ಯಾಯಾಲಯದಿಂದ ಪಡೆದು ಠಾಣೆಗೆ ಬಂದಾಗ ಪಡೆದು ಪರಿಶೀಲಿಸಿ ಸ್ವ-ಇಚ್ಛ ಹೇಳಿಕೆ ಪಡೆದು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ24-10-2019 ರಂದು FSL ವರದಿ ಪಡೆದು ಅದೇ ದಿನ ಹಾಲಿ ಪ್ರಕರಣದ ತನಿಖೆ ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ

ಸಲ್ಲಿಸಿರುತ್ತೇನೆ ಎಂಬುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನಿವೇನು ಹೇಳುತ್ತೀರಿ?

**ಆರೋಪಿಯ ಉತ್ತರಃ**

**ಪ್ರಶ್ನೆಃ** 5 ಹಾಲಿ ಪ್ರಕರಣದ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

**ಆರೋಪಿಯ ಉತ್ತರಃ**

**ಪ್ರಶ್ನೆಃ** 6 ಹಾಲಿ ಪ್ರಕರಣದಲ್ಲಿ ನಿಮ್ಮ ಪರವಾಗಿ ಮೌಖಿಕ ಸಾಕ್ಷಿ ಅಥವಾ ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸುವಿರಾ?

**ಆರೋಪಿಯ ಉತ್ತರಃ**

(**ಮೇಲ್ಕಂಡ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ** 03.06.2026 **ರಂದು ಬೆರಳಚ್ಚುಗಾರ್ತಿಯಿಂದ ಬೆರಳಚ್ಚುಮಾಡಿಸಿರುತ್ತೇನೆ**).

(ವಿನೋದ್ ಕುಮಾರ್. ಎಂ.)
ಅಪರ ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ,.
ಶಿರಾ.